ಪಿ.ಡಬ್ಲೂ.2

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

**ಒ.ಎಸ್.ನಂ:104/2022**

**ಪಿ.ಡಬ್ಲೂ:2**

**ಪ್ರಮಾಣ ವಚನ ಭೋಧಿಸಲಾಯಿತು.** ದಿನಾಂಕ:01.08.2024.

| | | |
|---|---|---|
| ಹೆಸರು | : | ಭೀಮಪ್ಪ ತಂದೆ ಚನ್ನವೀರಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಮೂಡಲ ಮಾಚಿಕೆರೆ ಗ್ರಾಮ, ಜಗಳೂರು ತಾಲೂಕು |

**ಮುಖ್ಯ ವಿಚಾರಣೆ:-ವಾದಿ ಪರ ಶ್ರೀ.ಡಿ.ವಿ.ಎನ್., ವಕೀಲರಿಂದ:-**

ನನಗೆ ತಿಪ್ಪೆರುದ್ರಪ್ಪ ಮತ್ತು ಈಶ್ವರಪ್ಪ ಗೊತ್ತು. ನಾನು ಈ ಸುಮಾರು 04 ವರ್ಷಗಳ ಹಿಂದೆ ತಿಪ್ಪೆರುದ್ರಪ್ಪ ಮತ್ತು ಈಶ್ವರಪ್ಪ ರವರ ಜೊತೆ ಜಗಳೂರು ನೊಂದಣಾ ಕಛೇರಿಗೆ ಬಂದಿರುತ್ತೇವೆ. ಆ ದಿನ ಒಂದು ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಪತ್ರವು ವಾದಿ ಸೌಭಾಗ್ಯಮ್ಮರವರಿಗೆ ತಿಪ್ಪೆರುದ್ರಪ್ಪರವರು ವಿಲ್ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಅದಕ್ಕೆ ನಾನು ಸಾಕ್ಷಿಯಾಗಿರುತ್ತೇನೆ. ನನ್ನ ಸಮಕ್ಷಮ ಸದರಿ ವಿಲ್‌ನ್ನು ತಿಪ್ಪೆರುದ್ರಪ್ಪರವರು ಮಾಡಿರುತ್ತಾರೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ವಿಲ್ ಆಗಿರುತ್ತದೆ, ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಅದನ್ನು **ನಿ.ಪಿ.11** ಎಂದು, ಸಾಕ್ಷಿಯ ಸಹಿಗಳನ್ನು **ನಿ.ಪಿ.11(ಎ)** ಮತ್ತು **11(ಬಿ)** ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ತಿಪ್ಪೆರುದ್ರಪ್ಪರವರು ತಮ್ಮ ಎಡಗೈ ಹೆಬ್ಬಟ್ಟು ಗುರುತನ್ನು ಹಾಕಿರುತ್ತಾರೆ. ಅದು ಸಾಕ್ಷಿ ಸದರಿ ಹೆಬ್ಬಟ್ಟು ಗುರುತುಗಳನ್ನು ನೋಡಿ ಗುರುತಿಸಿದ ಮೇರೆಗೆ ಹೆಬ್ಬೆಟ್ಟು ಗುರುತುಗಳನ್ನು ಕ್ರಮವಾಗಿ **ನಿ.ಪಿ.11(ಸಿ) ರಿಂದ 11(ಇ)** ಎಂದು ಗುರುತಿಸಲಾಯಿತು. ತಿಪ್ಪೆರುದ್ರಪ್ಪರವರು ಈಗ ತೀರಿ ಹೋಗಿ 2-3 ವರ್ಷವಾಗಿರುತ್ತದೆ.

ಪಿ.ಡಬ್ಲೂ.2

**<u>ಪಾಟೀ ಸವಾಲು:</u> ಪ್ರತಿವಾದಿ ಪರ ವಕೀಲರಿಂದ:-**

ಪ್ರತಿವಾದಿಯವರು ತಮ್ಮ ತಕರಾರನ್ನು ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ :</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು